# ಅಧ್ಯಾಯ 33

## ಓಂ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ



ಛಂದ:- ಸಿದ್ಧಸದ್ಗುರು ತನ್ನ ಗುರುವರ ಪಾದ ಹೊಂದಿಯೆ  ಸುಖಿಸಿದ
ಪಾದತೀರ್ಥದಿ ಸರ್ಪದಿಂ ಮೃತನಾದವನು ಪುನಃ ಬದುಕಿದ
ದುಃಖದೊಳು ಸತ್ಸಂಗ ವಿರಹದ ದುಃಖತ್ಯುತ್ಕೃಷ್ಟವು ಸುಖಗಳೊಳು
ಈಶನಿಗೆ ಸರ್ವಾರ್ಪಣವ ಮಾಡುವದು ಶ್ರೇಷ್ಠವು

ಶ್ರೀ ಸಿದ್ಧಾರೂಢ ಯತೀಶ್ವರನೇ, ನೀನು ಭಕ್ತರಿಗೋಸ್ಕರ ಪರಮ ಉದಾರನಿರುತ್ತಿ, ನೀನು ದೀನ ಪಾಲಕನು ಮತ್ತು ಕೃಪಾಸಾಗರನು, ಇಂಥಾ ಜಗದೋದ್ಧಾರಕನಾದ ನಿನ್ನನ್ನು ಕುರಿತು ನಾನು ನಮಸ್ಕಾರ ಮಾಡುತ್ತೇನೆ. ನಿನ್ನ ಸತ್ತೆಯಿಂದಲೇ ಜಗತ್ತು ನಡಿಯುತ್ತದೆ. ಅಜ್ಞರಾದಂಥ ನಮಗೆ ನಿನ್ನ ಮಹಿಮೆ ತಿಳಿಯುವದಿಲ್ಲ, ಎಂದು ಇಂಥಾ ತೊದಲು ನುಡಿಗಳಿಂದ, ಮತ್ತು ನೀನೇ ಕೊಟ್ಟಿರುವ ಶಕ್ತಿಯಿಂದ, ನಿನ್ನನ್ನು ವರ್ಣಿಸಲಿಕ್ಕೆ ಯತ್ನಿಸುವೆವು. ಸಮರ್ಥನಾದ ನೀನು ಒಲಿದಿಯೆಂದರೆ, ನನ್ನ ಈ ಅಲ್ಪ ಮತಿಯು ಉತ್ತಮವಾಗಿ ನಿನ್ನ ಗುಣ ಕಥಾದಿಗಳನ್ನು ವರ್ಣಿಸುವದಕ್ಕೆ ಒಳ್ಳೇ ಶಕ್ತಿ ಬರುವದು. ಅಗಾಧವಾಗಿರುವ ನಿನ್ನ ಚರಿತ್ರ ವರ್ಣಿಸಬೇಕಾದರೆ, ಅದಕ್ಕೆ ಶುದ್ಧವಾದ ಪ್ರೇಮವು ಇರತಕ್ಕದ್ದಾಗಿರುತ್ತದೆ. ಅಂಥಾ ಪ್ರೇಮದ್ದೆಶಯಿಂದ, ಕಥೆಯು ಬಹು ವಿಶದವಾಗಿ ಅದರಲ್ಲಿ ಪ್ರೇಮಾನಂದವು ಉಕ್ಕಿ ಬರುವದು. ಹ್ಯಾಗೆ ನಕ್ಷತ್ರಗಳೊಳಗೆ ಚಂದ್ರಕಳೆ ಇರುವದೋ, ಹಾಗೆ ಸಂತಕಥೆಗಳ ಮಧ್ಯದಲ್ಲಿ ನಿನ್ನ ಲೀಲೆ ಇರುವುದು. ನೀನು ಸಂತ ಮಂಡಳಿಯಲ್ಲಿ

ಶೋಭಿಸುತ್ತಿರುತ್ತಿ, ಎಂದು ಈ ಸಾರಿ ಸಂತ ಕಥೆಯನ್ನು ವರ್ಣಿಸುವೆನು. ಶ್ರೀ ಸಿದ್ಧಾರೂಢರು ಸ್ವತಃ ಹೇಳುತ್ತಾರೆ- "ಇವತ್ತಿನ ದಿವಸ ಸಂತಕೀರ್ತಿ ವರ್ಣಿಸತಕ್ಕದ್ದು. ಅದೇ ನನಗೆ ವಿಶೇಷವಾಗಿ ಸೇರುವದು ಆದ್ದರಿಂದ ಈಗಲೇ ಕಥೆಯನ್ನು ಆರಂಭಿಸುವವನಾಗು. ಯಾವ ಮಹಾತ್ಮರು ಮಡಿವಾಳ ಸ್ವಾಮಿಯೆಂಬ ನಾಮಧೇಯದಿಂದ ಗರಗ ಗ್ರಾಮದಲ್ಲಿ ವಾಸ ಮಾಡುತ್ತಿದ್ದರೋ, ಅವರ ಚರಿತ್ರೆಯನ್ನು ನಾನು ಶ್ರವಣ ಮಾಡಲಿಚ್ಛೆಸುವೆನು. ಅದನ್ನೇ ಹೇಳುವಂಥವನಾಗು." ಸಿದ್ಧ ಸದ್ಗುರುಗಳ ಈ ಆಜ್ಞೆಮಾನ್ಯ ಮಾಡಿ, ಸದ್ಗುರುಗಳು ತಮ್ಮ ಯೌವನ ಕಾಲದಲ್ಲಿ ಹುಬ್ಬಳ್ಳಿಗೆ ಬಂದಿದ್ದಾಗ ನಡೆದ ಪೂರ್ವ ಕಥೆಯನ್ನು ಸ್ಮರಣೆಗೆ ತಂದು ಹೇಳುವೆನು. ಪೂರ್ವದ ರಾಜಧಾನಿಯಾದ ಕಿತ್ತೂರ ನಗರವು ಕರ್ನಾಟಕ ದೇಶದಲ್ಲಿ, ಬಹು ಸುಂದರವಾಗಿಯೂ,ಅನೇಕ ವನೋಪವನಗಳಿಂದ ಮನೋಹರವಾಗಿಯೂ ಇತ್ತು. ಸಕಲ ವೇದ ಶಾಸ್ತ್ರಗಳಲ್ಲಿ ಪಾರಾಂಗತನಾದ ಒಬ್ಬ ಮಹಾತ್ಮನು ಈ ನಗರದಲ್ಲಿ ವಾಸ ಮಾಡುತ್ತಿದ್ದನು. ಆತನ ಹತ್ತಿರ ಮಡಿವಾಳಪ್ಪಾ ಎಂಬ

ನಾಮವುಳ್ಳ ಒಬ್ಬ ಬ್ರಹ್ಮಚಾರಿಯು ವಿದ್ಯಾರ್ಥಿಯಾಗಿ ಬಂದನು. ಈತನು ವಿದ್ಯಾಭ್ಯಾಸದಲ್ಲಿ ಬಹು ಚತುರನಾಗಿದ್ದು, ತೀವ್ರವಾಗಿ ವಿದ್ಯಾಗ್ರಹಣ ಮಾಡುತ್ತಾ, ಗುರು ಕೃಪೆಯಿಂದ ಸಕಲ ವೇದ ಶಾಸ್ತ್ರದಿಗಳನ್ನು ಮುಖೋದ್ಗತ ಮಾಡಿಕೊಂಡನು. ಒಂದಾನೊಂದು ದಿವಸ ಗುರುಗಳು ಗ್ರಾಮಾಂತರಕ್ಕೆ ಹೋಗಿರುವಾಗ ಅವರ ಮಠದೊಳಗೆ ಇಬ್ಬರು ರಾಜಕನ್ನಿಕೆಯರು ಬಂದು ಒಬ್ಬಂಟಿಗನಾಗಿರುವ ಮಡಿವಾಳಪ್ಪನನ್ನು ನೋಡಿದರು. ಆಗ ಆ ತರುಣಿಯರು ಈತನ ಮನೋವೃತ್ತಿ ಪರೀಕ್ಷಾರ್ಥವಾಗಿ, ನಾನಾ ಪ್ರಕಾರ ಕಾಮಚೇಷ್ಟೆಗಳನ್ನು ಮಾಡಲಾರಂಭಿಸಿದರು; ಆದರೆ ಆತನು ಕಾಮವನ್ನು ಜಯಿಸಿದಂಥವನಾದ್ದರಿಂದ ಆತನ ವೃತ್ತಿಯು ಅಚಲವಾಗಿ ನಿಂತಿತು. ಆತನ ವೈರಾಗ್ಯವು ಅತ್ಯದ್ಭುತವಾಗಿದ್ದು, ಸ್ತ್ರೀಯರ ಕಡೆಗೆ ಅಕಸ್ಮಾತ್ತಾಗಿ ಸಹಾ ನೋಡುತ್ತಿದ್ದಿಲ್ಲ, ಮತ್ತು ತನ್ನ ಅಧ್ಯಯನದಲ್ಲಿಯೇ ಸ್ವಸ್ಥ ಚಿತ್ತನಾಗಿದ್ದು, ಕಿಂಚಿತ್ ಮಾತ್ರವೂ ಮಾತಾಡದೇ ಇದ್ದನು. ಆಗ ಆ ತರುಣಿಯರು ಮನಸ್ಸಿನಲ್ಲಿ ಅತ್ಯಂತ ಚಕಿತರಾಗಿ ತಮ್ಮ

ಗೃಹವನ್ನು ಕುರಿತು ಹೋಗುವಂಥವರಾದರು. ಮಡಿವಾಳ ಮುನಿಯಾದರೂ, ಬಹು ಕ್ರೋಧದಿಂದ ಅನ್ನುತ್ತಾನೆ- "ಈ ತರುಣಿಯರು ಬಹು ಉಪದ್ರ ಕೊಡುವರು. ನಾನು ಈಗ ಈ ಗ್ರಾಮವನ್ನೇ ಬಿಟ್ಟು ಹೋಗುವೆನು, ಆದರೆ ನಾನು ಬರುವಷ್ಟರಲ್ಲಿ, ಇದು ನಾಶವಾಗಿ ಹೋಗುವುದು", ಎಂದು ಅನ್ನುತ್ತಾ ಹೊರಟುಹೋದನು. ತಾನು ಉಟ್ಟಂಥಾ ಧೋತರವನ್ನು ಹರಿದು ಹಾಕಿ, ಆಶ್ರಮ ತ್ಯಾಗಮಾಡಿ, ತತ್ಕಾಲವೇ ಉತ್ತರ ಹಿಂದೂಸ್ತಾನವನ್ನು ಕುರಿತು ಹೋಗುವಂಥವನಾದನು. ದಿಗಂಬರ ರೂಪಧರಿಸಿ, ಏಕಾಂಗಿಯಾಗಿ ಮಾರ್ಗದ ಮೇಲೆ ನಡೆಯುತ್ತಿರುವಾಗ ಈತನು ಸಾಕ್ಷಾತ್ ವಿದ್ಯಾಸೂರ್ಯನೋ ಎಂಬಂತೆ ಮುಖದ ಮೇಲೆ ತೇಜ ಕಾಣಿಸುತ್ತಿದ್ದುದ್ದನ್ನು ನೋಡಿ, ಎಲ್ಲರಿಗೂ ಬಹಳ ಆಶ್ಚರ್ಯವಾಗುತ್ತಿತ್ತು. ಮಡಿವಾಳ ಸ್ವಾಮಿಯು ಕಾಶಿಕ್ಷೇತ್ರಕ್ಕೆ ಹೋಗಿ, ಅಲ್ಲಿ ವಾದದಿಂದ ಎಲ್ಲಾ ಪಂಡಿತರನ್ನು ಜಯಿಸಿ, ಕ್ಷೇತ್ರದಲ್ಲೆಲ್ಲಾ ಕೀರ್ತಿ ಪಸರಿಸುತ್ತಾ, ಈ ಪ್ರಕಾರ ಬಹುಮಾನವನ್ನು ಸಂಪಾದಿಸಿದನು. ಅನಂತರ ಮಡಿವಾಳ

ಸ್ವಾಮಿಯು ವಿಶ್ವನಾಥನ ದರ್ಶನವನ್ನು ತೆಗೆದುಕೊಂಡು ಒಂದು ಏಕಾಂತ ಸ್ಥಾನದಲ್ಲಿ ಕುಳಿತುಕೊಂಡು, ತನ್ನ ಮನಸ್ಸಿಗೆ ಹೀಗೆ ವಿಚಾರಿಸುವಂಥವನಾದನು. "ಹಾ, ಹಾ, ನಾನು ಅತ್ಯಂತ ವಿರಕ್ತಿಯುಕ್ತನಾಗಿ ಎಲ್ಲಾ ವಿಷಯಗಳನ್ನು ತ್ಯಾಗ ಮಾಡಿ ಇಲ್ಲಿಗೆ ಬಂದೆನು. ಇಲ್ಲಿಗೆ ಬಂದು, ಇದೇನು ಮೂರ್ಖತ್ವವನ್ನು ಮಾಡಿದೆ ! - ಸಮಸ್ತ ಪಂಡಿತರನ್ನು ಜಯಿಸಿ, ಅವರ ಮುಖಭಂಗ ಮಾಡಿ, ನಾನು ಬಹಳ ಮಾನವನ್ನು ಸಂಪಾದಿಸಿದೆ, ಆದರೆ ಅವರು ಅತ್ಯಂತ ಖಿನ್ನರಾಗಿ, ಮಹಾ ದುಃಖವನ್ನು ಹೊಂದಿದ್ದಾರು. ಇಂದ್ರಿಯಗಳ ವಿಷಯಗಳನ್ನು ನಾನು ಬಿಟ್ಟು ಬಂದೆ. ಆದರೆ ಮಾನ ವಿಷಯವನ್ನು ಸಂಗ್ರಹಿಸಿ, ನಾನು ಮೋಸಹೊಂದಿದೆ. ಅಭಿಮಾನದಿಂದ ಪೂರ್ಣವಾಗಿ ನುಂಗಲ್ಪಟ್ಟು, ಅವಿಚಾರ ಮೂಲಕ ವ್ಯರ್ಥವಾಗಿ ನಾನು ವಂಚಿಸಲ್ಪಟ್ಟೆ. ವಾದದಲ್ಲಿ ಪಂಡಿತರನ್ನು ಜಯಿಸಿದ್ದರಿಂದ ನಾನು ಬ್ರಹ್ಮರಾಕ್ಷಸನಾಗಬೇಕಾಗುವದು. ನಾನು ಬ್ರಹ್ಮಜಿಜ್ಞಾಸವನ್ನು ಮಾಡದೆ ಇದ್ದದರಿಂದ ನನ್ನ ಈ ವೈರಾಗ್ಯವೇಷವಾದರೂ ವ್ಯರ್ಥವಾಗಿ ಹೋಯಿತು.

ಎರಡನೇಯವರಿಗೆ ದುಃಖ ಕೊಟ್ಟಿದ್ದರಿಂದ ನನ್ನ ಪರಮಾರ್ಥವೆಲ್ಲಾ ನಾಶವಾಯಿತು. ಮಾನದ ಸಲುವಾಗಿ ಜನ್ಮದ್ದೇ ಹಾನಿ ಮಾಡಿಕೊಂಡೆ. ಇವತ್ತಿನಿಂದ ನನ್ನ ಮುಖದೊಳಗಿಂದ ಸಂಸ್ಕೃತ ಭಾಷೆಯು ಹೊರಡಬಾರದು." ಹೀಗೆ ಅನ್ನುತ್ತಾ ಮಹಾ ಅನುತಾಪ ಹೊಂದಿದವನಾಗಿ, ತನ್ನ ಹತ್ತಿರ ಇದ್ದ ಭೂಷಣಾದಿಗಳನ್ನೆಲ್ಲಾ ಬಡವರಿಗೆ ಹಂಚಿಬಿಟ್ಟನು. ಕೂಡಲೇ ಹಿಮಾಲಯ ಪರ್ವತವನ್ನು ಕುರಿತು ಹೊರಟು ಹೋಗಿ, ಅಲ್ಲಿ ಒಂದು ಏಕಾಂತ ಸ್ಥಾನವನ್ನು ನೋಡಿ, ತಪಸ್ಸು ಮಾಡುತ್ತಾ ಇದ್ದು, ಮನಸ್ಸನ್ನು ದೃಢವಾದ ಅಭ್ಯಾಸದಲ್ಲಿ ಇಡುವಂಥವನಾದನು. ಕೆಲವು ಕಾಲದ ನಂತರ ಮನಸ್ಸಿನ ವೃತ್ತಿಯು ಅತ್ಯಂತ ದೃಢವಾಗಿ, ಶಾಂತಿ ತೇಜವು ಮುಖದ ಮೇಲೆ ಭಾಸಿಸುವಂಥಾದ್ದಾಯಿತು. ಅದೇ ಸಮಯದಲ್ಲಿ ಜೀವನ್ಮುಕ್ತ ಸ್ಥಿತಿಯು ಆತನಿಗೆ ಪ್ರಾಪ್ತವಾಯಿತು. ಈ ಪ್ರಕಾರ ಆತ್ಮ ಜ್ಞಾನವನ್ನು ಪ್ರಾಪ್ತಮಾಡಿಕೊಂಡು, ಹಿಮಾಲಯ ಗಿರಿಯನ್ನು ಬಿಟ್ಟು, ದಕ್ಷಿಣಕ್ಕೆ ಬಂದು, ಕಿತ್ತೂರ ಗ್ರಾಮದ ಸಮೀಪ ಬಂದು ನೋಡುವಾಗ, ಅದೆಲ್ಲಾ ನಾಶವಾಗಿ

ಹೋಗಿತ್ತು. ನಗರದಲ್ಲಿ ಪರಚಕ್ರಪ್ರವೇಶವಾಗಿ, ರಾಜಗ್ರಹದೊಳಗಿನ ಸ್ತ್ರೀಯರ ಸಮೇತ ಎಲ್ಲ ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದರು. ಇದನ್ನು ನೋಡಿ ಮಡಿವಾಳ ಸ್ವಾಮಿಗೆ ಬಹು ದುಃಖವಾಯಿತು. ಮಹಾತ್ಮನಿಗೆ ಯಾವಲ್ಲಿ ಛಳನವಾಗುವದೋ ಆ ಸ್ಥಾನವು ಶಾಪಗ್ರಸ್ತವೆಂದು ತಿಳಿಯತಕ್ಕದ್ದು. ಮಹಾತ್ಮನು ಆ ಸ್ಥಾನವನ್ನು ತನ್ನ ಅನುಗ್ರಹದಿಂದ ರಕ್ಷಿಸುವದಿಲ್ಲವಾದರೆ ಆ ಕೂಡಲೇ ಅದು ನಷ್ಟಪ್ರಾಯವಾಗುವದು ಇರಲಿ, ಈ ಕಾಲದಲ್ಲಿ ಮಡಿವಾಳ ಸ್ವಾಮಿಯವರು ಗರಗ ಗ್ರಾಮದಲ್ಲಿ ಹೋಗಿ ಇರುವಂಥವರಾದರು. ಇವರ ಜ್ಞಾನ ಸ್ಥಿತಿಯನ್ನು ತಿಳಿದಿರುವ ಅನೇಕ ಜನ ಭಕ್ತರು ನಿತ್ಯದಲ್ಲಿಯೂ ದರ್ಶನಕ್ಕೆ ಬರುತ್ತಿದ್ದರು. ಎಲ್ಲಾ ಭಕ್ತ ಜನರು ಕೂಡಿ, ಒಂದು ಹಳ್ಳದ ದಂಡಿಯಲ್ಲಿ ರಮ್ಯ ಸ್ಥಾನವನ್ನು ನೋಡಿ, ಅವರಿಗೆ ಮಠವನ್ನು ಕಟ್ಟಿಸಿ ಕೊಟ್ಟರು. ಮತ್ತು ಅಂದಿನಿಂದ ಮಡಿವಾಳ ಸ್ವಾಮಿಯವರು ಆ ಮಠದಲ್ಲಿಯೇ ಇರುವಂಥವರಾದರು. ಇವರ ಸೇವಾ ಮಾಡುವುದರ ದಶೆಯಿಂದ ಬಹುಮಂದಿ ಶಿಷ್ಯರು ಇರುತ್ತಿದ್ದರು.

ಏನೋ ಒಂದು ನಿಮಿತ್ತದಿಂದ ಆ ಮಹಾತ್ಮರ ದೃಷ್ಟಿ ನಾಶವಾಗಿ ಕುರುಡರಾದರು. ಇದೇ ಸಮಯದಲ್ಲಿ ಶ್ರೀ ಸಿದ್ಧಾರೂಢರು ಹುಬ್ಬಳ್ಳಿಯಲ್ಲಿ ಬಂದು ಭಕ್ತರ ಸಲುವಾಗಿ ಇರಲಾರಂಭಿಸಿದರು. ಅವರಾದರೂ ಮಡಿವಾಳ ಸ್ವಾಮಿಯವರ ಕೀರ್ತಿಯನ್ನು ಬಹಳವಾಗಿ ಕೇಳುತ್ತಿದ್ದರು. ಒಂದಾನೊಂದು ಕಾಲದಲ್ಲಿ ಸಿದ್ಧಾರೂಢರು ಕೆಲವು ಭಕ್ತರನ್ನು ಕೂಡಿಕೊಂಡು ಮಡಿವಾಳಪ್ಪನವರ ದರ್ಶನಕ್ಕೋಸ್ಕರ ಗರಗ ಗ್ರಾಮಕ್ಕೆ ಹೋಗವಂಥವರಾದರು. ಅವರ ದರ್ಶನಕ್ಕೆ ಬಂದಾಗ, ಆ ಭಕ್ತ ಜನರಿಗೆ- "ನಿಮ್ಮ ದ್ಯಾವಸ್ಥಾನ?"ವೆಂದು ಮಡಿವಾಳಪ್ಪನವರು ಕೇಳಲು, ಅವರು - ಹುಬ್ಬಳ್ಳಿ" ಅಂದರು - ಅದಕ್ಕೆ ಸ್ವಾಮಿಯವರು ಅವರನ್ನು ಕುರಿತು ಅನ್ನುತ್ತಾರೆ- "ನಿಮ್ಮ ಊರಿಗೆ ಒಬ್ಬ ಶಿವಯೋಗಿ ಬಂದಿರುವನೆಂದು ಕೇಳಿರುತ್ತವೆ, ಅದಕ್ಕೆ ಅವರು - ಆತನನ್ನೇ ಇಲ್ಲಿಗೆ ಕರೆದುಕೊಂಡು ಬಂದಿರುತ್ತೇವೆ." ಅಂದರು. ಆಗ್ಗೆ ಮಡಿವಾಳ ಸ್ವಾಮಿಯವರನ್ನುತ್ತಾರೆ - 'ಹೇ ಸಾಧು, ನಮಗೆ ನಿನ್ನ ಹೆಸರು ಹೇಳು". ಅದಕ್ಕೆ ಸಿದ್ಧರು - "ನನಗೆ ಆರೂಢ ಅನ್ನುತ್ತಾರೆ."

ಎಂದು ಹೇಳಿದರು. ಮಡಿವಾಳಪ್ಪನವರು - "ಹೆಸರು ಆರೂಢ ಅನ್ನುತ್ತಿ, ಒಮ್ಮೆಗೇ ಮೇಘದೊಳಗಿಂದ ಇಳಿದು ಬಂದಿದ್ದೀ ಏನು? ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ್ದಿಯೋ ಇಲ್ಲವೋ! ನನ್ನ ತಾಯಿ ಇಟ್ಟ ಹೆಸರು ಹೇಳು" ಅಂದರು. ಅದಕ್ಕೆ ಸಿದ್ಧರು ಅನ್ನುತ್ತಾರೆ- "ನಿಜವಾಗಿ ನಾನು ಮಾಯಾವರಣ ಮಾಡಿಕೊಂಡು ಬ್ರಹ್ಮ ದೊಳಗಿಂದ ಬಂದಿರುವೆನು. ಉದರದೊಳಗೆ ಜನನವೆಂಬದು ಮಿಥ್ಯವಾಗಿರುತ್ತದೆ." ಆಗ ಮಡಿವಾಳ ಸ್ವಾಮಿಯವರು ಸಿದ್ದರನ್ನು ಸಮೀಪ ಕರೆದು ಅವರನ್ನು ಸ್ಪರ್ಶಿಸಿ ನೋಡಿ, ಬಹಳ ಕೃಶವಾದ ಶರೀರ ಉಳ್ಳಂಥವರಾಗಿ ಕಂಡು, ಚಿಂತಿಸುತ್ತಾರೆ - "ಸತ್ಯವಾಗಿ ಈತನು ದೇಹವನ್ನು ದಂಡಿಸಿರುತ್ತಾನೆ ಮತ್ತು ಮನಸ್ಸು ಸಹ ಶಮೆಯಿಂದ ಖಂಡಿಸಿದಂತೆ ತೋರುವದು. ಇವುಗಳ ವಿನಹಾ ಅಗತಕ್ಕ ಜ್ಞಾನವಾದರೂ ನಿಜವಲ್ಲ " ಹೀಗಂದುಕೊಂಡು ಸಿದ್ಧರನ್ನು ಕುರಿತು ವಿಚಾರಿಸುತ್ತಾರೆ - ನೀನು ಸಂಚಾರ ಮಾಡುತ್ತಿರುವಾಗ, ಇಂಥಾದ್ದೊಂದು ನಗರವನ್ನು ಕಂಡಿರುವಿ ಏನು, ಯಾವಲ್ಲಿ ಸರ್ವ ಪ್ರದೇಶಗಳಲ್ಲಿ ಮಂಗಗಳೇ

ಆಡುತ್ತಿರುವವು ". ಸಿದ್ಧರು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಾರೆ- "ದೇಹವೇ ಈ ನಗರವಿರುತ್ತದೆ. ಚಪಲವಾದ ಮನೋವೃತ್ತಿಗಳೆ ಇದರ ಸರ್ವ ಪ್ರದೇಶದಲ್ಲಿ ಆಡುವ ಮಂಗಗಳು'. ಆಗ ಸಿದ್ಧರು ಉತ್ತರ ಕೊಡುತ್ತಾರೆ- "ಸತ್ಯವಾಗಿ ನಾನು ಒಂದು ಊರು ನೋಡಿರುತ್ತೇನೆ. ಅದರಲ್ಲಿ ಎಲ್ಲಾ ಕಡೆಯಲ್ಲಿಯೂ ನಾಯಿಗಳೇ ಅಡ್ಯಾಡುತ್ತಿರುತ್ತವೆ. ಇತರರು ಯಾರ್ಯಾರೂ ಇಲ್ಲ." ಆಗ ಮಡಿವಾಳ ಸ್ವಾಮಿಯವರು ಕೇಳುತ್ತಾರೆ- ಇಷ್ಟು ನಾಯಿಗಳಿಗೆ ಅನ್ನ ಯಾರು ಹಾಕುತ್ತಾರೆ ?" ಸಿದ್ಧರನ್ನುತ್ತಾರೆ - "ಅನ್ಯ ಗ್ರಾಮಗಳು ಸಮೀಪ ಇರುವವು. ಅವುಗಳೊಳಗಿನ ಜನರು ಕೊಡುತ್ತಾರೆ. ಅದು ಹ್ಯಾಗಂದರೆ ಆ ಇತರ ಗ್ರಾಮಗಳಲ್ಲಿ ಪ್ರಾಣಿಗಳು ಸತ್ತವೆಂದರೆ ಅವನ್ನು ಈ ನಾಯಿಗಳ ಗ್ರಾಮದಲ್ಲಿ ತಂದು ಹಾಕುವರು. ಅವುಗಳ ಮಾಂಸವನ್ನು ತಿಂದು ಈ ನಾಯಿಗಳು ಬದುಕುತ್ತವೆ. ಎಲ್ಲಾ ಕಡೆಯಲ್ಲಿ ವ್ಯಾಪಿಸಿರುವ ನಾಯಿಗಳೇ ಮನೋವೃತ್ತಿಗಳು, ಅನ್ಯ ಗ್ರಾಮಗಳೆಂಬುವವೇ ಪಂಚಭೂತಗಳು. ಸತ್ತ ಪಶುಗಳು ನಿರ್ಜೀವವಾಗಿರುವ

ವಿಷಯಗಳು, ಇವನ್ನು ಸೇವಿಸಿ ಆ ಮನೋವೃತ್ತಿಗಳು ಪುಷ್ಠವಾಗಿ ಇರುತ್ತವೆ. ಸಿದ್ಧರ ಚತುರ ಭಾಷಣವನ್ನು ಕೇಳಿ, ಇವರ ಹೃದ್ಗತ ಜ್ಞಾನ ಸ್ಥಿತಿಯನ್ನು ಮಡಿವಾಳಪ್ಪನವರು ತಿಳಿದುಕೊಂಡು ಪುನಃ ಕೇಳುತ್ತಾರೆ- "ಇಂಥಾದ್ದೊಂದು ಮನೆಯನ್ನು ನೋಡಿದಿಯೇನು ಅದರ ಪಾಕಶಾಲೆಯಲ್ಲಿ ಮೂರು ಅದ್ಭುತವಾದ ನದಿಗಳು ಕೂಡಿರುತ್ತವೆ, ಇವುಗಳೊಳಗಿನ ನೀರೇ ತೆಗೆದುಕೊಂಡು ಪಾಕಕಾರ್ಯವು ನಡೆದಿರುವುದು. ಆ ಪಾಕಶಾಲೆಯಿಂದ ಹೊರಗೆ ಬರಲಿಕ್ಕೆ ಮೂರು ಹರದಾರಿ ಉದ್ದ ದಾರಿ ಇರುವುದು. ಇಂಥಾದ್ದೊಂದು ಮನೆಯನ್ನು ಕಂಡಿದ್ದಿಯಾದರೆ, ನನಗೆ ಹೇಳು." ಸಿದ್ಧರಂದರು- "ನಾನು ನೋಡಿದ್ದೇನೆ. ದೇಹವೇ ಆ ಮನೆಯು, ತ್ರಿಕುಟವೇ ಇದರೊಳಗಿನ ಪಾಕಶಾಲೆಯು, ನಾಡಿತ್ರಯಗಳೇ ಇಲ್ಲಿ ಕೂಡಿರುವ ಮೂರು ನದಿಗಳು. ಇವುಗಳಿಂದ ಆಗುವ ಪಾಕವು ಸಮಾಧಿಯೇ ಇರುವದು. ಅಲ್ಲಿಂದ ಜಾಗ್ರದವಸ್ಥೆಯೆಂಬ ಹೊರಗೆ ಬರಲಿಕ್ಕೆ ಮಾತ್ರಾತ್ರಯ (ಅವಸ್ಥಾತ್ರಯ ಸೂಚಕ) ಗಳೇ ಮೂರು ಹರದಾರಿ ಉದ್ದ ರಸ್ತೆಯು." ಈ ಪ್ರಕಾರ ಸಿದ್ಧರು

ಅಂದದ್ದು ಕೇಳಿ, ಮಡಿವಾಳ ಸ್ವಾಮಿಯವರಿಗೆ ಅತ್ಯಂತ ಆನಂದವಾಗಿ, ಹುಬ್ಬಳ್ಳಿ ಭಕ್ತರನ್ನು ಕುರಿತು ಅನ್ನುತ್ತಾರೆ - "ದೈವ ಯೋಗದಿಂದ ನಿಮಗೆ ಸಿಕ್ಕಿದ ಇಂಥಾ ಮಹಾತ್ಮನ ಸಂಗತಿಯ ಮಹಿಮೆಯಿಂದ ನೀವು ಧನ್ಯರಾಗುವಿರಿ. ಈತನನ್ನು ದೃಢಭಾವದಿಂದ ಭಜಿಸಿರಿ. ಆಮೇಲೆ ಸ್ವಾಮಿಯವರು, ಸಿದ್ಧರನ್ನು ಕುರಿತು ಅನ್ನುತ್ತಾರೆ - "ನಾನು ಹೇಳುವದನ್ನು ಮನಸ್ಸಿನಲ್ಲಿ ದೃಢವಾಗಿ ಹಿಡಿದುಕೊ. ವಾಕ್, ಹಸ್ತ ಮತ್ತು ಶಿಶ್ನ ಈ ಮೂರು ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊ, ಇನ್ನೊಂದು ಹೇಳುವುದೇನೆಂದರೆ - ಹುಬ್ಬಳ್ಳಿ ಜನರು, ಮೇಲಕ್ಕೆ ಎತ್ತಿ ಕೆಳಗೆ ಹಾಕಿವರು ನೋಡಿ." ಇದನ್ನು ಕೇಳಿ ಸಿದ್ಧರು - " ಅದರ ಭಯವಿಲ್ಲ. ಯಾಕೆಂದರೆ ನಿಮ್ಮ ಕೃಪೆಯಿಂದ ಈ ವಿಷಯಗಳನ್ನೆಲ್ಲಾ ವರ್ಜಿಸಿರುತ್ತೇನೆ', ಅಂದರು. ಮಡಿವಾಳ ಸ್ವಾಮಿಯವರು ಪುನಃ ಸಿದ್ಧರಿಗನ್ನುತ್ತಾರೆ - "ಭಕ್ತ ಜನರು ನಿನಗೆ ವಸ್ತ್ರ ದ್ರವ್ಯಾದಿಗಳನ್ನು ಕೊಡುವರು. ಅವನ್ನು ಇತರರಿಗೆ ಕೊಡದೆ, ಹಾಗೆಯೇ ನಮಗೆ ಕಳುಹಿಸಿಕೊಡುತ್ತಿರು". ಇದಕ್ಕೆ ನಗುತ್ತಾ ಸಿದ್ಧರನ್ನುತ್ತಾರೆ "ಸ್ವಾಮೀ ನೀವು ವಿರಕ್ತರೆಂದು ನಾನು

ತಿಳಿದಿದ್ದೆ. ನೀವು ಸತ್ಯವಾಗಿ ದ್ರವ್ಯವನ್ನು ಸ್ವೀಕರಿಸುತ್ತೀರಾದರೆ, ನನಗೆ ಅಷ್ಟು ಹಣವನ್ನು ಕೊಡಿರಿ. ಅದನ್ನು ತೆಗೆದುಕೊಂಡು ದೊಡ್ಡ ವ್ಯಾಪಾರವನ್ನು ಮಾಡಿ ಅಪಾರ ಧನ ಸಂಗ್ರಹ ಮಾಡಿಕೊಂಡು, ಅದನ್ನೆಲ್ಲಾ ನಿಮಗೇನೇ ತಂದು ಕೊಡುವೆನು', ಸಿದ್ಧರ ಈ ಚತುರ ಭಾಷಣವನ್ನು ಮಡಿವಾಳ ಸ್ವಾಮಿಯವರು ಕೇಳಿ, ಬಹು ಪ್ರೇಮಯುಕ್ತರಾಗಿ ಸಿದ್ಧರನ್ನು ಆಲಿಂಗಿಸಿ, - "ನೀನು ಸ್ವ ಬಂಧು ಭೆಟ್ಟಿಯಾದಿ," ಅಂದರು. ವಸ್ತ್ರದ್ರವ್ಯಾದಿಗಳೆಂಬವೇ ಬ್ರಹ್ಮಾನುಭವ. ಅದನ್ನು ಅನಧಿಕಾರಿ ಇರುವಂಥವರಿಗೆ ಕೊಡಬಾರದು. ಆದರೆ ಗುರುಚರಣಗಳಲ್ಲಿ ಅದನ್ನು ಜತನ ಮಾಡತಕ್ಕದ್ದು, ಎಂಬ ಈ ಅರ್ಥದಿಂದ ಸ್ವಾಮಿಯವರು ಅಂದರು. ಅದಕ್ಕೆ ಸಿದ್ಧರು ಉತ್ತರ ಕೊಟ್ಟಿದ್ದೇನೆಂದರೆ " ನಿಮ್ಮ ಅನುಭವವನ್ನೇ ನನಗೆ ಕೊಡಿರಿ. ಅದನ್ನು ತೆಗೆದುಕೊಂಡು ಮನನದಿಂದ ವೃದ್ಧಿಗೊಳಿಸಿ, ತಂದು ನಿಮ್ಮ ಚರಣಗಳಿಗೆ ಅರ್ಪಿಸುವೆನು. " ಇದೇ ಸಮಯದಲ್ಲಿ ಒಂದು ಮಹಾ ಕೋಲಾಹಲ ಧ್ವನಿ ಹೊರಗಿನಿಂದ ಕೇಳಿ ಬಂತು. ಅದನ್ನು ಕೇಳಿ, ಮಡಿವಾಳ -ಸ್ವಾಮಿಯವರು ಅದೇನೆಂದು ತಿಳಿದುಕೊಂಡು

ಬಂದು ಹೇಳೆಂದು ಒಬ್ಬ ಶಿಷ್ಯನಿಗೆ ಆಜ್ಞಾಪಿಸಿದರು. ಅವನು ಹೊರಗೆ ಹೋಗಿ ನೋಡಿದಾಗ, ಒಬ್ಬ ಮನುಷ್ಯನು ಹಾವು ಕಡಿದು ಸತ್ತಿರುತ್ತಾನೆ. ಅವನ ಹತ್ತಿರ ಬಂದು ಆತನ ಹೆಂಡತಿ ಮಕ್ಕಳು ಬಹಳ ಆಕ್ರಾಂತ ಮಾಡುತ್ತಿರುವವರು. ಇತರ ಅನೇಕ ಮಂದಿಯು ಅಲ್ಲಿ ಕೂಡಿದೆ. ಈ ಪ್ರಕಾರ ನಡೆದಿರುವದನ್ನು ಆ ಶಿಷ್ಯನು ಕಂಡು ಸ್ವಾಮಿಗಳವರಿಗೆ ಬಂದು ತಿಳಿಸಿದ ಕೂಡಲೇ, ಅನ್ನುತ್ತಾರೆ- "ಈಗಲೇ ಈ ಸಿದ್ದರ ಪಾದೋದಕವನ್ನು ಮಾಡಿಕೊಂಡು ಹೋಗಿ, ಅವನ ಅಂಗಕ್ಕೆಲ್ಲಾ ಹಚ್ಚಿ, ಮುಖದಲ್ಲಿಯೂ ಹಾಕಿ, ಎಲ್ಲರೂ ಭಜನ ಮಾಡಿದರೆಂದರೆ, ಅವನು ನಿಶ್ಚಯವಾಗಿ ಬದುಕುವನು". ಆಗ ಭಕ್ತಜನರೆಲ್ಲಾ ಕೊಡಿ, ಸಿದ್ಧರಿಗೆ ಒಂದು ಆಸನದಲ್ಲಿ ಕೂಡ್ರಿಸಿ, ಬಹು ಪ್ರೇಮದಿಂದ ಅವರ ಚರಣಗಳನ್ನು ಪ್ರಕ್ಷಾಳಿಸಿ, ತೀರ್ಥವನ್ನು ತೆಗೆದುಕೊಂಡು ಹೋಗಿ ಆ ಮೃತನಾದವನ ಮುಖದಲ್ಲಿ ಹಾಕಿದರು. ಮತ್ತು ಶರೀರಕ್ಕೂ ಲೇಪಿಸಲಾರಂಭಿಸಿದರು. ಒಂದು ಘಳಿಗೆ ಹೊತ್ತು ಭಜನ ಮಾಡುತ್ತಲೇ ಆ ಮೃತನಾದವನ ; ಶರೀರವು ಅಕಸ್ಮಾತ್ತಾಗಿ ಚಲನವಾಗಲಿಕ್ಕೆ

ಹತ್ತಿ, ಕೂಡಲೇ ಆತನು ಎದ್ದು ಕುಳಿತನು. ಇದನ್ನು ನೋಡಿ ಎಲ್ಲರೂ ಅತ್ಯಂತ ಆನಂದಭರಿತರಾದರು. ಆಗ ಆತನ ಪತ್ನಿಯು ಬಂದು, ಆ ಇಬ್ಬರು ಮಹಾತ್ಮರ ಚರಣಗಳಿಗೆ ಬಿದ್ದು ಸ್ತುತಿಸುವಂಥವಳಾಗಿ, ಅನ್ನುತ್ತಾಳೆ- 'ಹೇ ದೀನೋದ್ಧಾರಕರೇ ಶಿವವಿಷ್ಣು ರೂಪಗಳಿಂದ ಇದ್ದಂತೆ ನೀವಿಬ್ಬರೂ ಏಕ ಆಗಿರುತ್ತೀರಿ. ನನಗೆ ನೀವು ಇವತ್ತಿನ ದಿವಸ ಪತಿದಾನವನ್ನು ಕೊಟ್ಟು ಸನಾಥಳನ್ನು ಮಾಡಿದಿರಿ". ಆಗ ಆಕೆಯ ಪತಿಯಾದರೂ ಸಶಕ್ತನಾಗಿ ಎದ್ದು ಬಂದು, ಇಬ್ಬರ ಚರಣಗಳಿಗೆ ಸದ್ಭಾವದಿಂದ ನಮಸ್ಕರಿಸಿ, ಅನ್ನುತ್ತಾನೆ- 'ಈ ನನ್ನ ದೇಹ, ಮನ ಮತ್ತು ಧನ, ಇವಷ್ಟನ್ನೂ ನಿನ್ನ ಚರಣಗಳಿಗೆ ಅರ್ಪಿಸುತ್ತೇನೆ." ಅದಕ್ಕೆ ಮಡಿವಾಳ ಸ್ವಾಮಿಗಳನ್ನುತ್ತಾರೆ- "ನಿನ್ನ ಧನವನ್ನು ನಿನಗೆ ಕೊಟ್ಟಿರುತ್ತೇವೆ". ಮನವನ್ನು ಆತ್ಮಸ್ವರೂಪದ ವಿಚಾರಕ್ಕೆ ಯೋಜಿಸಬೇಕು, ಅದು ಪೂರ್ಣವಾಗಿ ನಮಗೆ ಬೇಕಾಗಿರುತ್ತದೆ. ಶರೀರವನ್ನು ಎರಡು ಕೆಲಸಗಳಿಗೆ ಉಪಯೋಗಿಸಬೇಕು, ಸ್ತ್ರೀ ಪುತ್ರಾದಿಗಳ ಜೀವನವನ್ನು ಸಾಧಿಸುವ ಕೆಲಸಕ್ಕೆ ಹಚ್ಚಬೇಕು, ಮತ್ತು ಇತರ

ಕಾಲಗಳಲ್ಲಿ ನಿಷ್ಕಾಮದಿಂದ ಮಹಾತ್ಮರ ಸೇವೆ ಮಾಡುತ್ತಿರಬೇಕು. ಇಂಥಾ ಅಮೃತಪ್ರಾಯ ವಚನವನ್ನು ಕೇಳಿ, ಎಲ್ಲ ಭಕ್ತ ಜನರು ಜಯಜಯಕಾರವನ್ನೇ ಮಾಡಿ, ಆ ಇಬ್ಬರೂ ಮಹಾತ್ಮರಿಗೆ ಆರತಿ ಮಾಡಿದರು. ತ್ರಿಭುವನದಲ್ಲಿಯೂ ಆನಂದವು ಪೂರಿತವಾಗುವಂಥಾದ್ದಾಯಿತು. ಸಿದ್ಧರು ಕೆಲವು ದಿವಸ ಅಲ್ಲಿ ಇರುವಾಗ, ನಿತ್ಯದಲ್ಲಿಯೂ ವಾಶಿಷ್ಠಗ್ರಂಥವನ್ನು ಹೇಳುತ್ತಿದ್ದರು. ಆಗ ಸಿದ್ಧನಾಥರ ದರ್ಶನಕ್ಕೋಸ್ಕರ ದೇಶ ದೇಶಗಳಿಂದ ಜನಸಮುದಾಯವು ಬರುವಂಥಾದ್ದಾಯಿತು. ಅಮೃತಕ್ಕಿಂತ ಅಧಿಕ ಮಧುರ ಮತ್ತು ಹಿತಕಾರಿಯಾದ, ಸಿದ್ಧರ ಮುಖದಿಂದ ಹೊರಡುವಂಥ ವೇದಾಂತ ಭಾಷಣವನ್ನು ಶ್ರವಣಮಾಡಿ ಧನ್ಯರಾಗಬೇಕೆಂದು ಅನೇಕ ಶಾಸ್ತ್ರೀವ ಪಂಡಿತ ಜನರು ಗರಗ ಗ್ರಾಮಕ್ಕೆ ಬರುವಂಥವರಾದರು. ಎರಡು ನದಿಗಳು ಎಲ್ಲಿ ಸಂಗಮವಾಗಿರುವವೋ ಆ ಸ್ಥಾನವು ಪವಿತ್ರವೆಂದು ತಿಳಿಯತಕ್ಕದ್ದು. ಹ್ಯಾಗೆ ಗಂಗಾ ಯಮುನಾ ನದಿಗಳು ಕೂಡಿದಲ್ಲಿ ಪ್ರಯಾಗ ಕ್ಷೇತ್ರವಿದ್ದು ಅಲ್ಲಿ ಸ್ನಾನ ಮಾಡಿ ಉದ್ಧೃತರಾಗಬೇಕೆಂದು ಜನರು ಹೋಗುವರೋ, ಅದೇ

ಪ್ರಕಾರ, ಇಲ್ಲಿ ಇಬ್ಬರು ಮಹಾತ್ಮರು ಕೂಡಿರುತ್ತಾರಾದ್ದರಿಂದ ಈ ಗರಗ ಗ್ರಾಮವು ಅತ್ಯುತ್ತಮವಾದ ಮತ್ತು ಮುಮುಕ್ಷುಜನರಿಗೆ ಪರಮ ಪವಿತ್ರವಾದ ಕ್ಷೇತ್ರವಾಯಿತು. ಇರಲಿ, ಸಿದ್ದ ಮುಖದಿಂದ ವೇದಾಂತ ಭಾಷಣವು ನಡೆಯುತ್ತಿರುವಾಗ,

ಮಡಿವಾಳ ಸ್ವಾಮಿಯವರು ಅತ್ಯಾನಂದದಿಂದ ಆ ವಿಷದವಾದ ನಿರೂಪಣವನ್ನು ಕೇಳಿ ತಲೆದೂಗುತ್ತ ಇರುತ್ತಿದ್ದರು. ಒಮ್ಮೆ ಸಿದ್ಧರು ಜೀವನ್ಮುಕ್ತಿ ಪ್ರಕರಣವನ್ನು ನಿರೂಪಿಸುವಾಗ, ಮಡಿವಾಳಪ್ಪನವರು ಸಿದ್ದರಿಗೆ "ನಿಲ್ಲು, ನಿಲ್ಲು" ಎಂದು ತಾವೇ ಭಾಷಣ ಮಾಡುವಂಥವರಾಗಿ ಅನ್ನುತ್ತಾರೆ- "ಉತ್ತಮ ಪಕ್ವಾನ್ನವು ತಪೇಲಿಯೊಳಗಿರುವಾಗ, ಅಥವಾ ಹೊಟ್ಟೆಯೊಳಗೆ ಹೋದ ಮೇಲೆ ಅದರ ರುಚಿಯನ್ನು ಅನುಭವಿಸಲಿಕ್ಕೆ ಬರುವುದಿಲ್ಲ. ಆದರೆ ಅದು ನಾಲಿಗೆಯ ಮೇಲೆ ಇರುವಾಗ ಅಷ್ಟೇ ಅದರ ಸುಖ ಅನುಭವಿಸಲಿಕ್ಕೆ ಬರುತ್ತದೆ. ಅದೇ ಪ್ರಕಾರ ಜೀವಶಿವರ ಐಕ್ಯತ್ವವಾಗುವದರಿಂದ ಉಂಟಾಗುವ ಆನಂದವು ಜೀವನ ಅಜ್ಞಾನಾವಸ್ಥೆಯಲ್ಲಿಯೂ ತಿಳಿದು, ಅಥವಾ

ಜ್ಞಾನಾನಂತರವಾಗುವ ವಿದೇಹ ಕೈವಲ್ಯ ಸ್ಥಿತಿಯಲ್ಲಿಯೂ ಆ ಸುಖವು ಇರದು. ಆದರೆ ಜೀವನು ಜೀವನ್ಮುಕ್ತ ಸ್ಥಿತಿಯಲ್ಲಿರುವಾಗ್ಗೆ ಆ ಆನಂದವು ಭೋಗಿಸಲಿಕ್ಕೆ ಬರುವದು. ಈ ಮಧ್ಯಾವಸ್ಥೆಯಲ್ಲಿಯೇ ಆ ಬ್ರಹ್ಮಾನಂದವು ಅನುಭವಿಸಲ್ಪಡುವದು. ಈ ಪ್ರಕಾರ ಮಡಿವಾಳ ಸ್ವಾಮಿಯವರು ಅಂದ ವಚನವನ್ನು ಕೇಳಿ, ಎಲ್ಲಾ ಭಕ್ತಜನರು, ಬಹು ಆನಂದದಿಂದ, ಜಯಜಯಕಾರವನ್ನು ಘರ್ಜಿಸುತ್ತಾ ಆ ಇಬ್ಬರು ಮಹಾತ್ಮರನ್ನು ಪೂಜಿಸುವಂಥವರಾದರು. ಅನಂತರ ಸಿದ್ಧರು ಕೆಲವು ದಿನ ಅಲ್ಲೇ ಕಲೆಯುತ್ತಾ ಇರುವಾಗ, ಎಲ್ಲರೂ ಆನಂದ ಮಹೋತ್ಸವವನ್ನು ಭೋಗಿಸುತ್ತಿದ್ದರು. ಆಮೇಲೆ ಸಿದ್ಧಾರೂಢರು ಹುಬ್ಬಳ್ಳಿಗೆ ತಿರುಗಿ ಹೋಗಲಿಕ್ಕೆ ಮಡಿವಾಳ ಸ್ವಾಮಿಯವರ ಆಜ್ಞಾ ಬೇಡುವಾಗ, ಸ್ವಾಮಿಯವರು ಅನ್ನುತ್ತಾರೆ- “ಸಿದ್ಧನೇ ಇನ್ನು ಸಂಸಾರವನ್ನು ಸಾಕು ಮಾಡು. ಹುಬ್ಬಳ್ಳಿಯನ್ನು ಬಿಟ್ಟು ಎಲ್ಲೆಲ್ಲಿಯೂ ಹೋಗಬೇಡ. ಅಲ್ಲಿ ಅವರ್ಣನೀಯವಾದ ವೈಭವವು ನಿನಗೆ ಪ್ರಾಪ್ತವಾಗಿರುವುದು. ಈಗ ನಿನ್ನ ಕಿವಿಯಲ್ಲಿಯೇ ಒಂದು ಮಾತು ಹೇಳುತ್ತೇನೆ ಕೇಳು

ಕಾಷ್ಠ ಪಾಷಾಣಮಯವಾಗಿರುವ ಸ್ತ್ರೀರೂಪವನ್ನು ಸಹಾ ನೋಡಬೇಡ. ಸ್ತ್ರೀಯಿಂದ ಅನೇಕ ಋಷಿಮುನಿಗಳು ಮೋಸಹೊಂದಿರುವರಾದ್ದರಿಂದ, ನೀನಾದರೂ ಆ ಸ್ತ್ರೀ ದಶೆಯಿಂದ ನಿನ್ನ ಮನಸ್ಸನ್ನು ರಕ್ಷಿಸುತ್ತಿರು." ಮಡಿವಾಳ ಸ್ವಾಮಿಯವರು ಈ ಪ್ರಕಾರ ಅಂದು, ಎರಡೂ ಹಸ್ತಗಳಿಂದ ಸಿದ್ಧರನ್ನು ಅಪ್ಪಿಕೊಂಡು, ವಕ್ಷಸ್ಥಳಕ್ಕೆ ಗಟ್ಟಿಯಾಗಿ ಹಿಡಿದು, ಅತ್ಯಂತ ಗದ್ಗದಿತಕಂಠಯುಕ್ತರಾಗಿ ಎರಡೂ ನೇತ್ರಗಳಿಂದ ನೀರು ಸುರಿಸುತ್ತಿದ್ದರು. ಪ್ರೇಮಕಲ್ಲೋಲದಲ್ಲಿ ಇಬ್ಬರೂ ಮುಳುಗಿರುವಾಗ ಆ ವಿರಹ ಪ್ರಸಂಗವು ಅವರ್ಣನೀಯವಾಯಿತು. ಹ್ಯಾಗೆ ಪುತ್ರವಿಯೋಗದಿಂದ ದೀರ್ಘಕಾಲ ತನಕ ದುಃಖಿಸುತ್ತಿದ್ದ ಮಾತೆಯು ಪುತ್ರನು ಅಕಸ್ಮಾತ್ತಾಗಿ ಭೆಟ್ಟಿಯಾದ ಕೂಡಲೆ ಪ್ರೇಮ ಭರಿತಳಾಗುವಳೋ ಅದೇ ಪ್ರಕಾರ ಈ ಕಾಲದಲ್ಲಿ ಮಡಿವಾಳ ಸ್ವಾಮಿಯವರ ಪ್ರೇಮವು ಉಕ್ಕಿ ಬರುವಂಥದ್ದಾಯಿತು. ಅತ್ಯಂತ ಕಠಿಣವಾದ ವೈರಾಗ್ಯ ಉಳ್ಳಂಥಾ ಆ ಮಹಾ ಪುರುಷನು ಈ ಕಾಲದಲ್ಲಿ ಸಿದ್ಧನು ಹೋಗುತ್ತಾನೆಂದು ಬಹಳ

ತಳಮಳಿಸುವಂಥವನಾಗಿದ್ದು, ಇಬ್ಬರ ನೇತ್ರಗಳಿಂದಲೂ , ಪ್ರೇಮಾಶ್ರುಗಳು ಸುರಿಯುವಂಥವಾದವು. ಆಗ ಸದ್ಗದಿತ ಕಂಠರಾಗಿ ಮಡಿವಾಳ ಸ್ವಾಮಿಯವರು "ಹೇ ಬಾಳಾ, ನನ್ನನ್ನು ಎಂದು ಮರೆಯಬೇಡ," ಅಂದದ್ದನ್ನು ಕೇಳಿ, ಸಿದ್ಧರು ಆಶ್ವಾಸನ ಕೊಟ್ಟರು. ಸಿದ್ಧರ ಮಸ್ತಕದ ಮೇಲೆ ಸ್ವಾಮಿಯವರು ಹಸ್ತ ವನ್ನಿಟ್ಟು - " ನಿನ್ನ ಜ್ಞಾನವು ಅಖಂಡಿತವಾಗಿರಲಿ " ಎಂದು ಆಶೀರ್ವಾದ ಮಾಡಿದರು. ಮತ್ತು ಸಿದ್ದರು ಮಡಿವಾಳ ಸ್ವಾಮಿಯವರ ಚರಣಗಳನ್ನು ವಂದಿಸಿದರು. ಸಿದ್ಧರ ಮೇಲಿನ ಸ್ವಾಮಿಯವರ ಪ್ರೇಮವನ್ನು ನೋಡಿ ಅಲ್ಲಿದ್ದ ಸರ್ವ ಭಕ್ತ ಜನರು ಸಹಾ ಗದ್ಗದಿತರಾದರು. ಆಮೇಲೆ ಇಬ್ಬರಿಗೂ ಪಂಚಾರತಿಯನ್ನೆತ್ತಿ ಮಂಗಳಾರತಿಯನ್ನು ಹಾಡುವಂಥವರಾದರು. ಭಕ್ತ ಜನರನ್ನು ಕೂಡಿಕೊಂಡು ಸಿದ್ಧರು ಹುಬ್ಬಳ್ಳಿಗೆ ಹೊರಟು ಹೋಗುವಾಗ, ಮಡಿವಾಳಪ್ಪನವರು ಅವರನ್ನು ಕಳುಹಿಸಲಿಕ್ಕೆ ಬಹಳ ದೂರದತನಕ ಬರುವಂಥವರಾದರು. ಆಗ ಸಿದ್ದರಾಜರು, ಆ ಅಂಧರಾಗಿಯೂ ವೃದ್ಧರಾಗಿಯೂ ಇರುವಂಥಾ ಮಡಿವಾಳ ಸ್ವಾಮಿಯವರ

ಚರಣ ಹಿಡಿದು ಪ್ರಾರ್ಥಿಸಿ, ಅವರನ್ನು ಹಿಂದಿರುಗಿಸಿದರು. ಸ್ವಾಮಿಯವರ ಶಿಷ್ಯರು ಅವರನ್ನು ಕೈಹಿಡಿದು, ಮಠಕ್ಕೆ ಕರೆಕೊಂಡು ಹೋದರು. ಅಲ್ಲಿ ಮಡಿವಾಳ ಸ್ವಾಮಿಯವರು ಗಾದಿಯ ಮೇಲೆ ಕುಳಿತುಕೊಂಡು, ಶಿಷ್ಯರನ್ನು ಕುರಿತು ಬಹು ಪ್ರಕಾರ ಸಿದ್ಧರ ಗುಣಗಳನ್ನು ವರ್ಣಿಸುತ್ತ, ಕಣ್ಣುಗಳಿಂದ ಅಶ್ರುಗಳನ್ನೇ ಸುರಿಸುತ್ತಿದ್ದರು. ಹ್ಯಾಗೆ ದಶರಥರಾಜನು ರಾಮನು ವನಕ್ಕೆ ಹೋದಾಗ ಪುತ್ರನ ಗುಣಗಳನ್ನು ಸ್ಮರಣೆ ಮಾಡುತ್ತಾ ಪ್ರಲಾಪಿಸುತ್ತಿದ್ದನೋ, ಹಾಗೆಯೇ ಈ ಸಮಯದಲ್ಲಿ ಮಡಿವಾಳಪ್ಪನವರು ಕಾಣಿಸುವಂಥವರಾದರು. ಇದಾದ ಅಲ್ಪ ಕಾಲದಲ್ಲಿಯೇ ಅವರು ದೇಹವನ್ನಿಟ್ಟು, ವಿದೇಹ ಕೈವಲ್ಯ ಸ್ಥಿತಿಯನ್ನು ಹೊಂದಿದರು. ಅದೇ ಗರಗ ಗ್ರಾಮದಲ್ಲಿ ಅವರ ಭಕ್ತಜನರು, ಮಠದ ಸಮೀಪ ಒಂದು ಭವ್ಯವಾದ ಸಮಾಧಿ ಮಂದಿರವನ್ನು ಕಟ್ಟಿಸಿ ಅದರಲ್ಲಿ ಮಡಿವಾಳ ಸ್ವಾಮಿಯವರ ಶರೀರವನ್ನು ಸ್ಥಾಪಿಸಿದರು. ಇಂಥಾ ಈ ಮಹಾತ್ಮರ ಅದ್ಭುತ ಕಥೆಯನ್ನು ಶ್ರವಣ ಮಾಡಿದ ಮಾತ್ರದಿಂದ ಸರ್ವ ಕಲಿಮಲವು ನಾಶವಾಗಿ, ಅಂತಃಕರಣ ಶುದ್ಧಿಯಾಗಿ, ಜ್ಞಾನಾಧಿಕಾರವು

ಪ್ರಾಪ್ತವಾಗುವುದು ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ, ಅತಿ ಮನೋಹರವಾದ ಈ ಮೂವತ್ತಮೂರನೇ ಅಧ್ಯಾಯವನ್ನು ಶಿವದಾಸನು ಶ್ರೀ ಸಿದ್ಧಾರೂಢ ಸದ್ಗುರುಗಳ ಚರಣಾರವಿಂದಗಳಲ್ಲಿ ಅರ್ಪಿಸುತ್ತಿರುವನು.